# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.67/2023
ಪಿ.ಡಬ್ಯೂಃ 2
ಸಿಡಬ್ಲ್ಯೂ–2

ಸಾಕ್ಷಿದಾರರ ಹೆಸರು : ಸತೀಶ ಬಾಳು ಪೆಡ್ನೇಕರ

ತಂದೆಯ ಹೆಸರು : ಬಾಳು ಪೆಡ್ನೇಕರ

ವಯಸ್ಸು : 47 ವರ್ಷ

ಉದ್ಯೋಗ : ರೈತಾಪಿ

ವಾಸ : ರಾಮನಗುಳಿ , ಅಂಕೋಲಾ

ದಿನಾಂಕಃ 06–06–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.ಸ

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

ನನಗೆ ಚಾಸಾ –3 ರವರ ಪರಿಚಯ ಇರುತ್ತದೆ. ನನಗೆ 1 ರಿಂದ 4 ನೇ ಆರೋಪಿಗಳ ಪರಿಚಯ ಇರುತ್ತದೆ. ನಾನು ಅವರನ್ನು ನೋಡಿ ಗುರುತಿಸಿರುತ್ತೇನೆ .ಸಾಕ್ಷಿ ಈಗಾಗಲೇ ಗುರುತಿಸಲಾಗಿರುವ ನಿಪಿ–1 ನ್ನು ನೋಡಿ ಗುರುತಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ಸಾಕ್ಷಿಯ ಸಹಿಯನ್ನು ನಿಪಿ–1 (ಬಿ) ಎಂದು ಗುರುತಿಸಲಾಯಿತು. ಸ್ವದ್ರಿ ಸಹಿಯನ್ನು ನಾನು ದಿಃ 05–01–2022 ರಂದು ಕಂಬಾಣಿ ಗ್ರಾಮದ ಮದ್ದಣ ಮನೆಯ ನಾಲಾ ದಲ್ಲಿ ಸಹಿ ಮಾಡಿರುತ್ತೇನೆ . ಸ್ವದ್ರಿ ಸಹಿಯನ್ನು ನಾನು ಕಾಡು ಹಂದಿಯನ್ನು ಕೊಂದು ಸ್ವಚ್ಛ ಗೋಳಿಸಿ ಅದರ ಮಾಂಸವನ್ನು ಮಾಡುತ್ತಿದ್ದುರ ಬಗ್ಗೆ ಸಹಿಯನ್ನು ಹಾಕಿರುತ್ತೇನೆ. ಸ್ವದ್ರಿ ಪಂಚನಾಮೆಯನ್ನು ಮಧ್ಯಾಹ್ನ 2–00 ರಿಂದ 2–20 ರ ಸಮಯದಲ್ಲಿ ಬರೆಯಲಾಗಿರುತ್ತದೆ.ಆ ಸಮಯದಲ್ಲಿ ಪೋಲಿಸರು ಸ್ಥಳವನ್ನು ಪರಿಶೀಲನೆ ಮಾಡಿರುತ್ತಾರೆ ಮತ್ತು ವಿದ್ಯುತ್ ಹಾಯಿಸಿದ ತಂತಿಯನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಸ್ವದ್ರಿ ಈಗಾಗಲೇ ಗುರುತಿಸಲಾಗಿರುವ ಮುಮಾ–1 ತಂತಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸ್ವದ್ರಿ ತಂತಿಯನ್ನು ಯಾವುದೇ ತೋಟಕ್ಕೆ ಬರಬಾರದು ಎಂದು ಆಯಬೆಕ್ಸ ತಂತಿಯನ್ನು ಹಾಕಲಾಗಿರುತ್ತದೆ ಎಂದು ಅರಣ್ಯ ಸಿಬ್ಬಂದಿಗಳು ಹೇಳಿರುತ್ತಾರೆ.ನನ್ನ ಸಮಕ್ಷಮ ದಲ್ಲಿ ಅರಣ್ಯ

ಸಿಬ್ಬಂದಿಗಳು ಮಹಜರ ಮಾಡಿ ಪೊಟೊವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ-2 ರಿಂದ 7 ಪೊಟೊವನ್ನು ತೋರಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಈಗಾಗಲೇ ಗುರುತಿಸಲಾಗಿರುವ ನಿಪಿ-9 ನಕ್ಷೆಯನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಸದ್ರಿ ಸಹಿಯನ್ನು ನಿಪಿ-9 ಬಿ ಎಂದು ಗುರುತಿಸಲಾಯಿತು.ಸದ್ರಿ ಸಹಿಯನ್ನು ನಾನು ಪಂಚನಾಮೆ ಮಾಡುವ ಕಾಲಕ್ಕೆ ಹಾಕಿರುತ್ತೇನೆ.

2. ಸಾಕ್ಷಿಗೆ ಇನ್ನೊಂದು ಪಂಚನಾಮೆಯನ್ನು ತೋರಿಸಲಾದ್ದು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಸದ್ರಿ ಪಂಚಾನಮೆಯನ್ನು ನಿಪಿ-11 ಸಾಕ್ಷಿಯ ಸಹಿಯನ್ನು ನಿಪಿ-11ಎ ಎಂದು ಗುರುತಿಸಲಾಯಿತು.ಸದ್ರಿ ಸಹಿಯನ್ನು ನಾನು ದಿಃ 07-01-2022 ರಂದು ಮದ್ದನ ಮನೆ ನಾಲಾದಲ್ಲಿ ಸಹಿಯನ್ನು ಹಾಕಿರುತ್ತೇನೆ. ಸದ್ರಿ ಸಹಿಯನ್ನು ಆ ಕಾಡುಹಂದಿ ಯನ್ನು ಸುಟ್ಟು ಹಾಕಿದರ ಬಗ್ಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ 3 ಪೊಟೊಗಳನ್ನು ತೋರಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ . ಅದನ್ನು ನಿಶಾನೆಗೊಳಪಡಿಸುವ ಬಗ್ಗೆ ಆರೋಪಿತರ ಪರ ವಕೀಲರು ತಕರಾರನ್ನು ಎತ್ತಿದ್ದು ಸದ್ರಿ ತಕರಾರಿನ ಮೇರೆಗೆ ಅವುಗಳನ್ನು ನಿಪಿ-12 ರಿಂದ 14 ಎಂದು ಗುರುತಿಸಲಾಯಿತು. ಸದ್ರಿ ಪೊಟೊದ ಬಗ್ಗೆ ತೆಗೆದ ಸಿಡಿಯನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿರುತ್ತದೆ.ಸದ್ರಿ ಕಾಡುಹಂದಿ ಯು ಆಯಬೆಕ್ಸ ತಂತಿ ಬೇಲಿ ಯಿಂದ ವಿಧ್ಯುತ್ ಹರಿಯಲು ಬಿಟ್ಟಿರುವುದರಿಂದ ಮೃತ ಪಟ್ಟಿರುತ್ತದೆ. ಸದ್ರಿ ವಿಧ್ಯುತ್ ತಂತಿ ಬೇಲಿಯನ್ನು 1 ನೇ ಅರೋಪಿ ತನ್ನ ತೋಟಕ್ಕೆ ಹಾಕಿರುತ್ತಾರೆ ಎಂದು ನನಗೆ ತಿಳಿದು ಬಂದಿರುತ್ತದೆ.

**ಪಾಟಿ; ಸವಾಲು :** ಆರೋಪಿ ಪರ ಶ್ರೀ ಆರ್ ಎನ್ ಎಚ್ ವಕೀಲರಿಂದಃ

3. ನಾನು ರಾಮನಗುಳಿ ಅರಣ್ಯ ಇಲಾಖೆಯಲ್ಲಿ ಅರಣ್ಯ ವಿಕ್ಷಕನಾಗಿ 20 ವರ್ಷಗಳಿಂದ ಕೆಲಸ ಮಾಡಿರುತ್ತೇನೆ. ವಲಯ ಅರಣ್ಯಾಧಿಕಾರಿಗಳ ಕಚೇರಿ ರಾಮನಗುಳಿ ಯಲ್ಲಿ ಇರುತ್ತದೆ ಎಂದರೆ ಸರಿ . ನಾನು ರಾಮನಗುಳಿ ಅರಣ್ಯ ಕಚೇರಿಯಲ್ಲಿ ಖಾಯಂ ನಾಗಿ ಅರಣ್ಯ ವಿಕ್ಷಕನಾಗಿರುವುದಿಲ್ಲ. ಚಾಸಾ-1 ಮತ್ತು 4 ರವರು ರಾಮನಗುಳಿ ಕ್ವಾಟರ್ಸ ದಲ್ಲಿರುತ್ತಾರೆ. ನಾನು ರಾಮನ ಗುಳಿ ಕ್ವಾಟರ್ಸ ದಲ್ಲಿ ವಾಸವಾಗಿರುವುದಿಲ್ಲ. ನಾನು ನನ್ನ ಮನೆಯಲ್ಲಿ ವಾಸ ವಾಗಿರುತ್ತೇನೆ ನಮ್ಮ ಮನೆಯಿಂದ ವಲಯ ಅರಣ್ಯಾಧಿಕಾರಿ ಗಳ ಕಚೇರಿ

ರಾಮನಗುಳಿ ಒಂದು ಕಿ.ಮೀ ದೂರದಲ್ಲಿರುತ್ತದೆ. ನಾನು ನನ್ನ ಮೇಲಾಧಿಕಾರಿಗಳು ಪೋನ್ ಮುಖಾಂತರ ಎಲ್ಲೆಲ್ಲಿ ಹೋಗಬೇಕು ಎಂದುನಿರ್ದೇಶನ ನೀಡಿದಂತೆ ನಾನು ಆಯಾ ಸ್ಥಳಕ್ಕೆ ಹೋಗುತ್ತೇನೆ. ರಾಮನಗುಳಿ ಅರಣ್ಯ ಪ್ರದೇಶದಲ್ಲಿ ನೆಟ್ ವರ್ಕ ಸಮಸ್ಯೆಯಾದಾಗ ನಾನು ರಾಮನಗುಳಿ ಅರಣ್ಯ ಕಚೇರಿಗೆ ಹೋಗಿ ನನ್ನ ಮೇಲಾಧಿಕಾರಿಗಳ ಜೊತೆ ಚರ್ಚೆ ಮಾಡಿ ನಂತರದಲ್ಲಿ ಅವರು ಹೇಳಿದ ಸ್ಥಳಕ್ಕೆ ಹೋಗುತ್ತೇನೆ. ನಾನು ಅರಣ್ಯ ವಿಕ್ಷಕ ಕೆಲಸವನ್ನು ದಿನದ ಸಮಯದಲ್ಲಿ ಮಾತ್ರ ಮಾಡುತ್ತೇನೆ. ರಾತ್ರಿ ಪಾಳಿ ಇರುವುದಿಲ್ಲ. ನೀವು ಎಲ್ಲೆಲ್ಲ ಕೆಲಸ ನಿರ್ವಗಿಸುತ್ತಿರಿ ಎಂದು ಪ್ರತಿ ದಿನದ ಡೈರಿಯಲ್ಲಿ ಅರಣ್ಯ ವಲಯ ಕಚೇರಿ ಗೆ ಹೋಗಿ ಸಹಿ ಹಾಕಿ ಬರುತ್ತಿರಾ ಎಂದರೆ ಇಲ್ಲ. ಆ ಬಗ್ಗೆ ಡಿ.ಆರ್ ರವರು ಸೆಕ್ಷನಲ್ಲಿ ಬರೆಯುತ್ತಾರೆ. ಅವರು ಅವರ ದಿನಚರಿ ಡೈರಿಯಲ್ಲಿ ಬರೆಯುತ್ತಾರೆ. ಅಂತಹ ಡೈರಿಯಲ್ಲಿ ನೀವು ಎಲ್ಲೆಲ್ಲಿ ಕರ್ತವ್ಯ ನಿರ್ವಹಿಸುತ್ತಿರಿ ಎಂದು ಡೈರಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ.

4. ದಿಃ 05-01-2022 ರಂದು ಗಸ್ತು ತಿರುಗಬೇಕು ಎಂದು ನನಗೆ ಮತ್ತು ಚಾಸಾ 3 ರವರಿಗೆ ಚಾಸಾ-1 ರವರು ತಿಳಿಸಿರುತ್ತಾರೆ. ದಿಃ05-01-2022 ನಾನು ಮತ್ತು ಚಾಸಾ -3 ರವರು ರಾಮನಗುಳಿಯಿಂದ ಕಮ್ಮಾಣಿ ಕಡೆಗೆ ಹೊರಟಿರುತ್ತೇವೆ. ಆ ದಿನ ನನ್ನ ಹಾಗೂ ಚಾಸಾ -3 ರವರ ಜೊತೆ ಗಾರ್ಡ ರವರು ಇದ್ದರು. ಆ ದಿನ ಚಾಸಾ -1 ರವರಿಗೆ ಪೊನ ವಗೈರೆ ಬಂದಿದ್ದವು. ನಿಮ್ಮ ಪ್ರಕಾರ ನಿವೆಲ್ಲರೂ ಒಂದೇ ಕಡೆ ಎಂದರೆ ಕಮ್ಮಾಣಿ ಕಡೆಗೆ ಗಸ್ತು ತಿರುಗುತ್ತಿದ್ದೀರಾ ಎಂದರೆ ನಾವುಗಳು ಬೇರೆ ಬೇರೆ ಕಡೆಗಳಲ್ಲಿ ಗಸ್ತು ತಿರುಗುತ್ತಿದ್ದೆವು. ಹಲವಳ್ಳಿ ಕಮ್ಮಾಣಿ ಕಲ್ಲೇಶ್ವರ ಹಾಗೂ ಮದ್ದನ ಮನೆ ಜನ ವಸತಿ ಇರುವ ಪ್ರದೇಶ ಎಂದರೆ ಸರಿ , ಅಲ್ಲಿ ಸುಮಾರು ಒಂದು ಸಾವಿರ ಮನೆಗಳು ಇರತ್ತವೆ ಎಂದರೆ ಸರಿ. ಸದ್ರಿ ಪಂಚನಾಮೆಯನ್ನು ನಾನು ಬರೆದಿರುವುದಿಲ್ಲ. ಆ ಪಂಚನಾಮೆ ಯನ್ನು ಇದೇ ರೀತಿಯಾಗಿ ಬರೆಯಬೇಕು ಎಂದು ನಾನು ಮಾಹಿತಿಯನ್ನು ಕೊಟ್ಟಿಲ್ಲ. ನೀವು ಪಂಚನಾಮೆ ಗೆ ಮಾಹಿತಿ ಯನ್ನು ಕೊಡದೇ ಇರುವುದರಿಂದ ಅದರಲ್ಲಿ ಎನೆಲ್ಲಾ ಬರೆದಿರುತ್ತದೆ ಎಂದು ನಿಮಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಮದ್ದನಮನೆ ನಾಲಾ ಸಿರ್ಸಿ ಬೇಡತಿ ಹಳ್ಳದ ನೀರು ಕೂಡಿ ಹರಿದು ಹೋಗುತ್ತದೆ ಎಂದರೆ ಸರಿ . ಕಾಡು ಹಂದಿ ಹೇಗೆ ಸತ್ತು ಹೋಯಿತು ಎಂದು ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ . ಆ ನಾಲಾದಲ್ಲಿ ಆ ದಿನ ನೀರು ಹರಿಯುತ್ತಿತ್ತು. ನಿಪಿ-2 ರ

ಪೊಟೋದಲ್ಲಿ ನೀರು  ಹರಿಯುತ್ತಿರುವುದಿಲ್ಲ. ನಿಪಿ–2 ರ ಪೊಟೋದಲ್ಲಿ ಸದ್ರಿ ಪ್ರಾಣಿಯ ತಲೆ ಮತ್ತು ಬಾಲ ಕಾಣುವುದಿಲ್ಲ ಎಂದರೆ ಸರಿ. ನಿಪಿ–5 ರ ಪೊಟೋದಲ್ಲಿ ಇರುವ ಪ್ರಾಣಿಯ ಬಾಲ ಕಾಣುವುದಿಲ್ಲ  ಎಂದರೆ ಸರಿ. ನಿಪಿ–5 ರ ಪೊಟೋದಲ್ಲಿ ಯಾವುದೇ ಪ್ರಾಣಿಯನ್ನು ಸುಟ್ಟ ಬಗ್ಗೆ ಕುರುಹು ಗಳು ಕಾಣುವುದಿಲ್ಲ ಎಂದರೆ ಸರಿ. ಯಾವುದೇ ಪ್ರಾಣಿಯನ್ನು ಸುಟ್ಟರೆ  ಎಲ್ಲಾ ಪ್ರಾಣಿಯ ಕಾಲಿನ ವಸಡುಗಳು ಹಾಗೂ ಚರ್ಮ ಬೆಂದು ಹೋಗುತ್ತದೆ ಎಂದರೆ ಸರಿ. ಸದ್ರಿ ನಿಪಿ–2 ರ ಪೊಟೋದಲ್ಲಿ ಕಾಲನ್ನು ಸುಟ್ಟದ್ದಾಗಲಿ ಚರ್ಮವನ್ನು  melt ಮಾಡಿದರ ಬಗ್ಗೆ ಕಾಣಿಸುವುದಿಲ್ಲ ಎಂದರೆ ಸರಿ. ಯಾವುದೇ ಪ್ರಾಣಿಯನ್ನು ಬೆಂಕಿಯಲ್ಲಿ ಸುಟ್ಟ ನಂತರ ಅದರ ಮಾಂಸ ಕೆಂಪುನ ಬಣ್ಣದಿಂದ ಕಂದು ಬಣ್ಣಕ್ಕೆ ತಿರುಗುತ್ತದೆ ಎಂದರೆ ಸರಿ. ಆಯಬೆಕ್ಸ ತಂತಿ ನಿಮ್ಮ range office ದಲ್ಲಿ ತುಂಬಾ ಇರುತ್ತದೆ ಎಂದರ ಸರಿ.  ನ್ಯಾಯಾಲಯದ ಮುಂದೆ ಇರುವ ಮು.ಮಾ–1 ತಂತಿಯ ಮೂಲಕ ನೀವು ಹೇಳಿದಂತೆ current ಹರಿ ಬಿಡಲು ಸಾಧ್ಯ ಇಲ್ಲ ಎಂದರೆ ಸರಿ. ಆ ಬೆಯಬೆಕ್ಸ ತಂತಿಯಿಂದ ಕರೆಂಟ್ ಕಂಬವು  ತೋಟದಿಂದ ಎಷ್ಟು ದೂರದಲ್ಲಿ ಇತ್ತು ಎಂದು ನಿಮಗೆ ಹೇಳಲಾಗುತ್ತದಾ ಎಂದರೆ  ಇಲ್ಲ.

5. ನನಗೆ 1 ನೇ ಆರೋಪಿಯ ವೈಯಕ್ತಿಕ ಪರಿಚಯ ಇರುತ್ತದೆ. 1 ನೇ ಆರೋಪಿಯ ಮನೆಯು ದೊಡ್ಡಕಟ್ಟಾಧಲ್ಲಿರುತ್ತದೆ ಮದ್ದನ ಮನೆ ದೊಡ್ಡಕಟ್ಟಾದಿಂದ 12 ಕಿ.ಮೀ ದೂರದಲ್ಲಿರುತ್ತದೆ. ಮದ್ದನಮನೆಯಲ್ಲಿರುವ  ತೋಟವು  ಯಾರಿಗೆ ಸಂಬಂದಪಟ್ಟದ್ದು ಎಂದು ನೀವು ವಿಚಾರಣೆ ಮಾಡಿರುತ್ತಿರಾ ಎಂದರೆ ಇಲ್ಲ.   ನೀವು ಅರಣ್ಯ ವಿಕ್ಷಕನಾಗಿ ಕೆಲಸ ಮಾಡಿಕೊಂಡು ಇರುವುದರಿಂದ ನೀವು ನಿಮ್ಮ ಮೇಲಾಧಿಕಾರಿಗಳು ಹೇಳಿದ ಮಾತನ್ನು ಕೇಳಬೇಕಾಗುತ್ತದೆ ಎಂದರೆ ಸರಿ.

6. ಸಿದ್ದಿ ಸಮುದಾಯದವರು forest ಇಲಾಖಾಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ACF ರವರ ಬಳಿ 2021 ರಲ್ಲಿ  ಒಂದು ದೂರನ್ನು ಕೊಟ್ಟಿದ್ದರು ಎಂದರೆ ಸರಿ.  ಆಗ ನಿಮಗೆಲ್ಲಾ ಇಷ್ಟೆಲ್ಲಾ ನೀವುಗಳು ಕೆಲಸ ಮಾಡುತ್ತಿದ್ದರು ಸಹ ಸರಿಯಾಗಿ ಕೆಲಸ  ಮಾಡುತ್ತಿಲ್ಲಾ ಎಂದು ಸಿದ್ದಿ ಸಮುದಾಯ ದವರು ನಿಮ್ಮ ಮೇಲೆ ದೂರನ್ನು ಕೊಡುತ್ತಿದ್ದಾರೆ ಎಂದು ಸಿಟ್ಟು ಸಹ ಇತ್ತು ಎಂದರೆ  ಸರಿ. ಹಾಗಾಗಿ ಸಿದ್ದಿ ಸಮುದಾಯದ ಮೇಲೆ ಚಾಸಾ 1 ರವರು ಸುಳ್ಳು  ದೂರನ್ನು ಆರೋಪಿತರ ಮೇಲೆ ಕೊಟ್ಟಿರುತ್ತಾರೆ ಎಂದರೆ ಸರಿ. ಆರೋಪಿ ನಂ 4 ರವರು  ಸಿದ್ದಿ ಸಮುದಾಯದವರೊಂದಿಗೆ ಸ್ವಲ್ಪ ಸೇರಿ ಕೊಂಡಿರುವುದರಿಂದ ಅವರ ಮೇಲೆ ಸಹ ಒಂದು

ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ದಿಃ 05-01-2022 ರಂದು ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳಕ್ಕೆ ಹೋದದ್ದು ಇಲ್ಲ ಮಹಜರಿಗೆ ಸ್ಥಳದಲ್ಲಿ ಸಹಿ ಮಾಡಿದ್ದು ಇಲ್ಲ ನಿಮ್ಮ ಸಮಕ್ಷಮ ಪಂಚನಾಮೆಯನ್ನು ತಯಾರಿಸಿದ್ದು ಇಲ್ಲ. ಹಾಗೂ ಪೊಟೊವನ್ನು ತೆಗೆದದ್ದು ಇಲ್ಲ ಎಂದರೆ ಸರಿ. ಹಾಗಾಗಿ ನಿಪಿ-5 ರ ಪೊಟೊದಲ್ಲಿ 1 ಮತ್ತು 2 ಆರೋಪಿತರು ನಿರ್ಭಿತಿಯಿಂದ ಎಲ್ಲಾವನ್ನು ನೋಡುತ್ತಾ ಪೊಟೊದಲ್ಲಿ ನಿಂತಿರುತ್ತಾರೆ ಎಂದರೆ ಸರಿ.

7. ದಿಃ 07-01-2022 ರಂದು ನಿಮ್ಮ ಸಮಕ್ಷಮ ದಲ್ಲಿ ನಿಪಿ-11 ನ್ನು ಮಾಡಿ ನಿಪಿ-12 ರಿಂದ 14 ಪೊಟೊವನ್ನು ತೆಗೆದಿರುತ್ತಾರೆ ಎಂಬುದು ಸುಳ್ಳು ಎಂದರೆ ಸರಿ . ನ್ಯಾಯಾಲಯದ ಮುಂದೆ ಇರುವ ಮು.ಮಾ-1 ನ್ನು ಅರಣ್ಯ ಸಿಂಬದಿಇಗಳು ಅಮಾನತ್ತನ್ನು ಪಡಿಸಿದ್ದು ಇಲ್ಲ ಎಂದರೆ ಸರಿ . ನಿಮ್ಮ ಮೇಲಾಧಿಕಾರಿಗಳಿಗೆ ಹೆದರಿ ನೌಕರಿ ಹೋಗುತ್ತದೆ ಎಂಬ ಭಯದಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಈ ಪ್ರಕರಣದ ಬಗ್ಗೆ ನಿಮಗೆ ಏನು ಗೊತ್ತಿಲ್ಲದೆ ಇದ್ದರೂ ಸಹ ನೀವು ಸಾಕ್ಷ್ಯವನ್ನು ನುಡಿಯಲು ಬಂದಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.